| SRI BHAGAWAN MAHAVEER JAIN COLLEGE<br>Vishweshwarapuram, Bangalore.<br><br>**Mock Question Paper 1** – January 2020 | **Course:** II year PUC<br>**Subject:** Kannada<br>**Max. Marks:** 100<br>**Duration:** 3:15 |
|---|---|

**ಸೂಚನೆ:– ಪ್ರಶ್ನೆಪತ್ರಿಕೆಯ ಮೇಲೆ ಏನನ್ನೂ ಬರೆಯಬಾರದು.**

## ‘ಅ’–ವಿಭಾಗ

**I.ಕೆಳಗಿನ ಎಲ್ಲಾ ಪ್ರಶ್ನೆಗಳಿಗೆ ಒಂದೊಂದು ಪೂರ್ಣವಾಕ್ಯದಲ್ಲಿ ಉತ್ತರಿಸಿ. 1x10=10**

1. ಮಯತನೂಜೆ ಎಂದರೆ ಯಾರು?
2. ತನು ಯಾವಾಗ ಕರಗಬೇಕು?
3. ಕನಸು ಬಂಡಿಯ ಕೆಳಗೆ ನಿದ್ರಿಸುವುದು ಹೇಗೆ?
4. ಕವಯಿತ್ರಿ ಯಾವುದಕ್ಕೆ ಧಿಕ್ಕಾರವಿರಲಿ ಎನ್ನುತ್ತಾರೆ?
5. ಸರ್ಕಾರಿ ಆಸ್ಪತ್ರೆಯ ಬಗ್ಗೆ ಬಸಲಿಂಗನಲ್ಲಿದ್ದ ಅಭಿಪ್ರಾಯವೇನು?
6. ಕಿಡ್ನಿಸ್ಟೋನ್ ಬಗ್ಗೆ ತಿಳಿಯಲು ಲೇಖಕಿ ಯಾರನ್ನು ಭೇಟಿ ಮಾಡಿದರು?
7. ಕಲಾಂರವರ ಕ್ರಿಯಾಶೀಲತೆಗೆ ಸಾಕ್ಷಿ ಯಾವುದು?
8. ದುರ್ಗಪ್ಪನ ಪ್ರಕಾರ ತರ್ಲೆ ಡಿಪಾರ್ಟ್‌ಮೆಂಟ್ ಯಾವುದು?
9. ರೇಂಜರ್ ಆನೆಗೆ ಶೂಟ್ ಮಾಡುವಂತೆ ಯಾರಿಗೆ ಸೂಚಿಸಿದನು?
10. ಪೋಲೀಸರು ಏನೆಂದು ಮಹಜರು ಬರೆದುಕೊಂಡರು?

## ‘ಆ’–ವಿಭಾಗ

**II. (ಅ) ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: 4x2=8**

11. ಸೂರ್ಯ ಮತ್ತು ದೀಪಗಳಿಂದಾಗುವ ಉಪಯೋಗಗಳಾವುವು?
12. ಹೆಂಡತಿಯ ಹರಿಬಕ್ಕಾಗಿ ಗಂಡುಗೂಸು ಏನು ಮಾಡುತ್ತಾನೆ?
13. ಬಡತನ ಹೇಗೆ ಬಯಲಾಯಿತು?
14. ಬಾನು ಮತ್ತು ಮರದ ನಿತ್ಯನೂತನತೆಯ ಬಗ್ಗೆ ಕವಿ ಏನು ಹೇಳಿದ್ದಾರೆ?
15. ಮುದುಕ ಏನೆಂದು ಗೋಗರೆಯುತ್ತಾನೆ?

**(ಆ) ಇವುಗಳಲ್ಲಿ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ. 3x2=6**

16. ಬ್ರಿಟಿಷರು ಬರುವ ಮೊದಲು ವಾಲ್ಪರೈ ಹೇಗಿತ್ತು?
17. ಲೇಖಕರಲ್ಲಿ ಕನ್ನಡ ಪ್ರೀತಿ ಸ್ಫುರಿಸಿದ್ದು ಹೇಗೆ?
18. ಧಣಿಗಳು ಹೊಳೆಯನ್ನು ಹೇಗೆ ಮೂದಲಿಸುತ್ತಿದ್ದರು?
19. ಸಂಸ್ಕೃತ–ಕನ್ನಡಗಳು ಸೇರಿದರೆ ಹೇಗೆ ಸೊಗಯಿಸುತ್ತದೆ?

**(ಇ) ಇವುಗಳಲ್ಲಿ ಮೂರು ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ: 2x3=6**

20. ನಮ್ಮ ಕಡೆ ಕೆಮ್ಮುವುದು ಕಾಲಿಂಗ್ ಬೆಲ್ ಇದ್ದ ಹಾಗೆ ಎಂದು ನಿರೂಪಕರು ಹೇಳುವುದೇಕೆ?
21. ಜಬ್ಬಾರ್ ನಿರೂಪಕರಿಗೆ ಅಂಚೆ ವಿಲೇವಾರಿ ಬಗ್ಗೆ ಅಸಡ್ಡೆಯಿಂದ ಏನು ಹೇಳಿದ?
22. ಆನೆಯೇ ತಿಪ್ಪಣ್ಣನ ಸಾವಿಗೆ ಕಾರಣವೆಂದು ದುರ್ಗಪ್ಪ ಹೇಳಿದಾಗ ನಿರೂಪಕರ ಪ್ರತಿಕ್ರಿಯೆ ಏನು?
23. ಆನೆಯನ್ನು ಹದ್ದುಬಸ್ತಿನಲ್ಲಿಡುವ ಬಗ್ಗೆ ವೇಲಾಯುಧನ ಅಪ್ಪ ಏನು ತಿಳಿಸಿದ್ದ?

## ಇ–ವಿಭಾಗ

**III. (ಅ) ಇವುಗಳಲ್ಲಿ ಯಾವುದಾದರೂ ಎರಡಕ್ಕೆ ಸಂದರ್ಭ ಸೂಚಿಸಿ, ಸ್ವಾರಸ್ಯ ಬರೆಯಿರಿ. 3x2=6**

24. “ಉಳಿದವರಳಿವೆನಗೇವುದು”?
25. “ಲೋಕದೊಳ್ ಮಡಿಯೇ ನಿರ್ಮಲ ಚಿತ್ತವ್ಯೆ”
26. ವೇಷ ಮರೆಸಿವೆ ಅಷ್ಟೆ – ಈ ಎಲ್ಲ ಕೇಡುಗಳು.

**(ಆ) ಇವುಗಳಲ್ಲಿ ಒಂದನ್ನು ಕುರಿತು ಸಂದರ್ಭಸೂಚಿಸಿ, ಸ್ವಾರಸ್ಯ ಬರೆಯಿರಿ: 3x1=3**

27. “ಈ ಅದೃಷ್ಟ ನಿನಗೂ ಇತ್ತಲ್ಲೆ”?.
28. “ಅನಕ್ಷರಸ್ಥರ ಪಾರ್ಲಿಮೆಂಟು”

**(ಇ) ಇವುಗಳಲ್ಲಿ ಒಂದನ್ನು ಕುರಿತು ಸಂದರ್ಭಸೂಚಿಸಿ, ಸ್ವಾರಸ್ಯ ಬರೆಯಿರಿ:** **3x1=3**

29. ಆನೆಗೂ ಮಾನ ಮರ್ಯಾದೆ ಇರುತ್ತೆ ತಿಳಕೊ.
30. ಆನೆ ಬೇಲಿದಾಟಿ ಹೋಯ್ತು ಸಾರ್.

**ಈ–ವಿಭಾಗ**

**IV.** (ಅ) **ಯಾವುದಾದರೂ ಮೂರು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **4x3=12**

31. ರಾವಣನಲ್ಲಿ ಕಂಡು ಬರುವ ಪಶ್ಚಾತ್ತಾಪವನ್ನು ಕವಿ ಹೇಗೆ ನಿರೂಪಿಸಿದ್ದಾನೆ?
32. ಜಾಲಿಮರ ಮತ್ತು ದುರ್ಜನರನ್ನು ಸಮೀಕರಿಸಿರುವುದರ ಔಚಿತ್ಯವನ್ನು ಚರ್ಚಿಸಿ?
33. 'ಹತ್ತಿ–ಚಿತ್ತ–ಮತ್ತು–" ಕವಿತೆಯ ಸ್ವಾರಸ್ಯವನ್ನು ವಿವರಿಸಿ?
34. ಕವಯಿತ್ರಿ ಅಗ್ನಿಪರ್ವತ, ಜ್ವಾಲಾಮುಖಿ ಆಗಿದ್ದೇನೆ ಎನ್ನಲು ಕಾರಣಗಳೇನು?

**(ಆ) ಇವುಗಳಲ್ಲಿ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **4x2=8**

35. ಅಭಿವೃದ್ಧಿ ತರುವ ಪ್ರಾಕೃತಿಕನಾಶದ ಸ್ವರೂಪವನ್ನು ಪಠ್ಯದ ಹಿನ್ನೆಲೆಯಲ್ಲಿ ಚರ್ಚಿಸಿ?
36. ಚಿನ್ನಮ್ಮ ಬೆಳ್ಳಿ ಲೋಟವನ್ನು ಮತ್ತೆ ಹೊಳೆಗೆ ಎಸೆಯಲು ಕಾರಣಗಳೇನು? ವಿಶ್ಲೇಷಿಸಿ?
37. ಮುದ್ದಣ ಮತ್ತು ಮನೋರಮೆಯರ ಸಂವಾದದ ಸ್ವಾರಸ್ಯವನ್ನು ವಿವರಿಸಿ?

**(ಇ) ಇವುಗಳಲ್ಲಿ ಎರಡು ಪ್ರಶ್ನೆಗಳಿಗೆ ಐದಾರು ವಾಕ್ಯಗಳಲ್ಲಿ ಉತ್ತರಿಸಿ.** **4x2=8**

38. ನಿರೂಪಕರು ಕೊಡಲಿ ವಸೂಲಿ ಮಾಡಲು ಹೋಗಲಿಲ್ಲವೇಕೆ? ವಿವರಿಸಿ?
39. ನಿದ್ರೆ ಮಂಪರಿನಲ್ಲಿದ್ದ ಡ್ರೈವರ್ ಪರಂಧಾಮಕ್ಕೆ ಹೋದ ಸಂದರ್ಭವನ್ನು ವಿವರಿಸಿ?
40. ತನ್ನ ಆನೆಯ ಬಗ್ಗೆ ಕೃಷ್ಣೇಗೌಡನಿಗೆ ಬೇಸರ ಮೂಡಲು ಕಾರಣವೇನು?

**'ಉ'–ವಿಭಾಗ**

**V. ಇವುಗಳಲ್ಲಿ ಒಂದು ಪದ್ಯದ ಭಾವವನ್ನು ವಿವರಿಸಿ.** **5x1=5**

41. ಎಬ್ಬಿಸಲು ಭುಗಿಲೆಂಬನೋ ಮೇ
ಣೊಬ್ಬಳೇತಕೆ ಬಂದೆ ಮೋರೆಯ
ಮಬ್ಬಿದೇಕೆಂದೆನ್ನ ಸಂತೈಸುವನೊ ಸಾಮದಲಿ
ತುಬ್ಬುವುದೊ ತಾ ಬಂದ ಬರವಿದು
ನಿಬ್ಬರವಲಾ ಜನದ ಮನಕಿ
ನ್ನೆಬ್ಬಿಸಿಯೇ ನೋಡುವೆನೆನುತ ಸಾರಿದಳು ವಲ್ಲಭನ.

**ಅಥವಾ**

42. ಕ್ರಿಸ್ಮಸ್ ಹೊತ್ತು ತಂದಿದೆ ಈ ಮನೆಗೆ
ಕೇಕು, ಚಳಿ, ನಕ್ಷತ್ರದೀಪ,
ಪ್ಲಾಸ್ಟಿಕ್ ನಕಲಿನ ಕುಬ್ಜತೆಗೆ
ಕರುಣಿಸಿದೆ ಗಿಡದ ರೂಪ;
ಅದಕ್ಕೆ ಮಂಜಿನ ಕೆಲಸ ಮಾಡಿದೆ ಹತ್ತಿ,
ಸ್ಕರ್ಟಿನ ಹುಡುಗಿಯ ಮೊಣಕಾಲಲ್ಲಿ.
ಬೆಚ್ಚಗಾಗಿದೆ ಮೋಂಬತ್ತಿ.

**ಭಾಷಾಭ್ಯಾಸ**

**VI.** (ಅ) **ಇವುಗಳಲ್ಲಿ ಯಾವುದಾದರೂ ಆರಕ್ಕೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ.** **2x6=12**

43. **ಈ ಪದಗಳಿಗೆ ಅರ್ಥ ಬರೆಯಿರಿ.**
(1) ಇನ (2) ಕಾಳ
44. **ಈ ಪದಗಳ ಸಮಾನಾರ್ಥ ಬರೆಯಿರಿ.**
(1) ಪಥ (2) ಬಾನು
45. **ಈ ಪದಗಳ ತತ್ಸಮ–ತದ್ಭವ ರೂಪಬರೆಯಿರಿ.**
(1) ಅಗ್ಗಿ (2) ಮೊಗ
46 **ಈ ಪದಗಳ ನಿಷೇದರೂಪ ಬರೆಯಿರಿ:**
(1) ಬರುವೆನು (2) ನಿಲ್ಲುವರು

47. **ಈ ಕ್ರಿಯಾಪದಗಳ ಕಾಲವನ್ನು ಗುರ್ತಿಸಿ.**
    (1) ನಲಿವಳು (2) ಹೋದವು
48. **ಈ ಪದಗಳ ವಿಭಕ್ತಿ ಪ್ರತ್ಯಯವನ್ನು ಹೆಸರಿಸಿ.**
    (1) ಧರೆಯೊಳ್ (2) ರಾವಣನೇ
49. **ಈ ದ್ವಿರುಕ್ತಿಗಳನ್ನು ವಾಕ್ಯದಲ್ಲಿ ಪ್ರಯೋಗಿಸಿ:**
    (1) ನಕ್ಕೂನಕ್ಕು (2) ಬೇಗ ಬೇಗ

**(ಆ) ಇವುಗಳಲ್ಲಿ ಒಂದನ್ನು ಕುರಿತು ಪ್ರಬಂಧ ರಚಿಸಿ.** **1x5=5**

50. ಕ್ರೀಡೆ ಮತ್ತು ನಮ್ಮ ಆರೋಗ್ಯ
51. ಕೃಷಿ ಸಂಸ್ಕೃತಿಯನ್ನು ಉಳಿಸಿ–ಬೆಳೆಸುವ ಅಗತ್ಯ.

**(ಇ) ಇವುಗಳಲ್ಲಿ ಒಂದು ವಿಷಯವನ್ನು ಕುರಿತು ಪತ್ರ ರಚಿಸಿರಿ.** **1x4=4**

52. ಅಂತಿಮ ಪರೀಕ್ಷೆಗೆ ನಿಮ್ಮ ಸಿದ್ಧತೆಗಳ ಬಗ್ಗೆ ಪರವೂರಿನಲ್ಲಿರುವ ನಿಮ್ಮ ಗೆಳೆಯ/ಗೆಳತಿಗೊಂದು ಪತ್ರ ಬರೆಯಿರಿ.
53. ನಿಮ್ಮ ಬಡಾವಣೆಯಲ್ಲಿ ಹೆಚ್ಚುತ್ತಿರುವ ಅಪರಾಧಗಳ ಬಗ್ಗೆ ದಿನ ಪತ್ರಿಕೆಯೊಂದಕ್ಕೆ ಒಂದು ಪತ್ರ ಬರೆಯಿರಿ.

**(ಈ) ಇವುಗಳಲ್ಲಿ ಒಂದು ಗಾದೆ ಮಾತನ್ನು ವಿಸ್ತರಿಸಿ.** **1x4=4**

54. “ಕೂತು ಉಂಡರೆ ಕುಡಿಕೆ ಹೊನ್ನು ಸಾಲದು’.
55. “ದೇಶ ಸುತ್ತಬೇಕು, ಕೋಶ ಓದಬೇಕು.”

******